

ದಿನಕ್ಕಿಂತ ಹೆಚ್ಚಿಗೆ ಯಾರಿಗೂ ಉದ್ಯಾನವನದಲ್ಲಿ ಇರಗೊಡುವುದಿಲ್ಲ.

ದೆಹಲಿಯಿಂದ ಹೊರಟ ನಮ್ಮ ರೈಲು ಬೆಳಗ್ಗೆ ಐದು ಗಂಟೆಗೆ ನಮ್ಮನ್ನು ರಾಮನಗರದಲ್ಲಿ ತಂದು ಕೊಡವಿತು. ಅದು ರೈಲಿಗೆ ಕೊನೆಯ ನಿಲ್ದಾಣ. ತೆಳ್ಳನೆಯ ಬಿಳಿ ಮೋಡಗಳಾಗಿ ಸುಯ್ದಾಡುತ್ತಿದ್ದ ತೇವದ ಮಂಜುಗಾಳಿ ಮುಖಕ್ಕೆ ರಾಚಿದಾಗ ಥರಥರ ನಡುಗತೊಡಗಿದೆವು. ಮೆದುಳು ಅಲ್ಲಾಡಿಸುವಷ್ಟು ಚಳಿ ತೀವ್ರವಾಗಿತ್ತು. ನಾವು ಹಾಕಿಕೊಂಡಿದ್ದ ಸ್ವೆಟರು, ಮಂಕಿ ಟೋಪಿಗಳ ಸೀಳಿಕೊಂಡು ಚಳಿ ಮುನ್ನುಗ್ಗುತ್ತಿತ್ತು. ಇದಕ್ಕೊಂದು ಕಾರಣವೂ ಇತ್ತು. ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಹಿಮಾಲಯ ಭಾಗದಲ್ಲಿ ಹಿಮಪಾತವಾದ ಕೂಡಲೇ ಅಲ್ಲಿನ ಚಳಿಗಾಳಿ ಇತ್ತ ಬೀಸಿ ಮಳೆಯಾಗತೊಡಗುತ್ತದೆ. ಹಿಮಾಲಯದ ಮಂಜಿನ ಮೋಡಗಳು ಇತ್ತ ಕಡೆಗೆ ನುಗ್ಗುವ ಕಾರಣ ಸಹಜವಾಗಿಯೇ ಶೀತ ಹೆಪ್ಪುಗಟ್ಟಿರುತ್ತದೆ.

ನಮ್ಮನ್ನು ಕರೆದೊಯ್ಯಲು ಬಂದಿದ್ದ ಆದಿಲ್ ಎಂಬಾತ ತುಂಬಾ ಚತುರ. ನಮ್ಮ ಪ್ರವಾಸದ ಏರ್ಪಾಡೆಲ್ಲಾ ಮಾಡಿದ್ದವನು ಅವನೇನೆ. ಆದರೆ ಆತ "ನೀವು ಎಲ್ಲೂ ತಡ ಮಾಡುವಂತಿಲ್ಲ ಬೇಗ ಹೊರಡಬೇಕು" ಎಂದು ಗಡಿಬಿಡಿ ಮಾಡಿದ್ದು ನಮಗಿಷ್ಟವಾಗಲಿಲ್ಲ. ನಾವು ರಾತ್ರಿ ಪ್ರಯಾಣದ ಆಯಾಸ ಬಗೆಹರಿಯುವಷ್ಟು ವಿಶ್ರಾಂತಿ ತೆಗೆದುಕೊಳ್ಳುವ ಮೂಡಿನಲ್ಲಿದ್ದೆವು. ಆದರೆ ಅವನಿಗೆ ಬೇರೆಯೇ ದುಗುಡವಿತ್ತು. "ಸರ್ ನಾಳೆ ನಾಡಿದ್ದು ಮಳೆಯಾಗುವ ಸಂಭವವಿದೆ. ಮಳೆಯಾದರೆ ಹುಲಿಗಳು ಸಿಗುವುದು ಕಷ್ಟ. ನೀವು ಅಷ್ಟು ದೂರದಿಂದ ಬಂದದ್ದು ಬೇಕಾರ್ ಆಗಬಾರದಲ್ಲ" ಎಂದಾತ ಚಡಪಡಿಸುತ್ತಿದ್ದ. ಆತನಿಗೆ ನಿನ್ನೆ ದಿನ ಹುಲಿಗಳು ಕಾಣಿಸಿಕೊಂಡ ಜಾಗದ ಖಚಿತ ವರ್ತಮಾನವೂ ಸಿಕ್ಕಿ ಹೋಗಿತ್ತು. ಹುಲಿಗಳು ಜಾಗ ಬದಲಾಯಿಸುವ ಮೊದಲೇ ನಮ್ಮನ್ನು ಅಲ್ಲಿಗೆ ಕರೆದ್ಯೊಯ್ದು ತೋರಿಸಿ ಬಿಡಬೇಕೆಂಬ ಅವಸರ ಅವನಲ್ಲಿತ್ತು.

ಜತೆಗೆ "ಅಷ್ಟು ದೂರದ ಕರ್ನಾಟಕದಿಂದ ಬಂದಿದ್ದೀರಿ ನಿಮಗೆ ನಿರಾಶೆ ಆಗಬಾರದಲ್ಲ" ಎಂದು ರೇಜಿಗೆ ಬರುವಷ್ಟು ಸಲ ಹೇಳುತ್ತಿದ್ದ. ಅಷ್ಟರಲ್ಲೇ ಅರಣ್ಯದವರ ಚೆಕ್ ಪೋಸ್ಟ್ ಬಂದಿತು. ಅಲ್ಲಿ ಇಲಾಖೆ ತಪಾಸಣೆ, ಪ್ರವೇಶದ ಅನುಮತಿಗೆ ಸರದಿ ಸಾಲು. ನಮ್ಮಗಳ ಗುರುತು ಖಾತ್ರಿ, ಲಗೇಜ್ ಚಕ್ಕಿಂಗ್ ಹಾಳಾಮೂಳು ಅಂತಾನೆ ಜಾಸ್ತಿ ಸಮಯ ಹಿಡಿಯಿತು. ಬೇಗ ತಲುಪುವ ಒತ್ತಡದಲ್ಲಿದ್ದ ಆದಿಲ್ ತುಸು ಹೆಚ್ಚೇ ಒದ್ದಾಡುತ್ತಿದ್ದ. ಅಲ್ಲಿನ ಅರಣ್ಯ ಪ್ರವೇಶಕ್ಕೆ ತುಂಬಾ ಸೂಕ್ಷ್ಮ ಕಾನೂನು, ತೀವ್ರ ಕಟ್ಟಳೆಗಳಿದ್ದವು.

ಅರಣ್ಯದ ಚೆಕ್ ಪೋಸ್ಟ್ ದಾಟಿದ ನಂತರ ಜಿಮ್ ಕಾರ್ಬೆಟ್ ತಲುಪುವ ಅತಿ ದುರ್ಗಮ ಹಾದಿ